ತರಬೇತಿಯನ್ನು, ಒಂದು ಪದವಿಯನ್ನು ಸಹ ಪಡೆದು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ಐದರಿಂದ ಹತ್ತು ಹಳ್ಳಿಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಈ ಒಂದು ಳನೇ ವೇತನ ಆಯೋಗದಲ್ಲಿ ಅವರಿಗೆ ಸಿಯಾದ ರೀತಿಯಾದ ವೇತನವನ್ನು ಕೊಡದೆ ಸರ್ಕಾರ ಅನ್ಯಾಯ ಮಾಡಿರುವುದು ನಿಜಕ್ಕೂ ದುರದೃಷ್ಟಕರ. ಇದರ ಬಗ್ಗೆ ಇಲಾಖೆಯ ನಿರ್ದೇಶಕರು ಮತ್ತು ಕಾರ್ಯದರ್ಶಿಗಳು ಮೊದಲೇ ಆ ಆಯೋಗಕ್ಕೆ ಮಾಹಿತಿಯನ್ನು ಒಂದು ಪರದಿಯನ್ನು ಉತ್ತಮವಾಗಿ ಸಲ್ಲಿಸದೇ ಇರುವುದರಿಂದ ಈ ರೀತಿ ಅವರುಗಳಿಗೆ ಅನ್ಯಾಯವಾಗಿದೆ. ಮಾನ್ಯ ಮಂತ್ರಿಗಳಲ್ಲಿ ನಾನು ತಪ್ಪು ಮುಖೇನ ಮನವಿ ಮಾಡುತ್ತಿದ್ದೇನೆ, ಮಂತ್ರಿಗಳು ಮತ್ತು ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಇವರ ಬಗ್ಗೆ ಕೂಡಲೇ ಕ್ರಮಕೈಗೊಂಡು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುವ ಐಳು ಸಾವಿರ ಬಿಲ್ಲರೆ ಕೃಷಿ ಸಹಾಯಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಇವರನ್ನು ನೇಮಕ ಮಾಡಿದಾಗ ತ್ರೀಯೊಂದು ಗ್ರಾಮಕ್ಕೂ ಒಬ್ಬೊಬ್ಬರು ನೌಕರರು ವ್ಯವಸಾಯ ಇಲಾಖೆಯಲ್ಲಿ ಇರಬೇಕು ಎನ್ನುವ ಅಭಿಪ್ರಾಯ ಇತ್ತು. ಆದರೆ ಪೂರಾ ನೇಮಕ ಮಾಡಿರಲಿಲ್ಲ. ನೇಮಕ ಮಾಡತಕ್ಕಂಥ ಕಾಲದಲ್ಲಿ ಅನೇಕ ಸ್ಥಳಗಳ ಬಗ್ಗೆ ಯೋಚನೆ ಮಾಡದೆಯೇ ಅದು ಬಿಟ್ಟುಹೋಗಿತ್ತು. ಮಂತ್ರಿ ಇನ್ನೂ ಅನೇಕರು ಆ ಸ್ಥಳ ಬಿಟ್ಟಿದ್ದಾರೆ. ಈಗ ಅನೇಕ ಸಲಹೆ ಬರುತ್ತಿದೆ. ಈಗ ಗ್ರಾಮ ಪಂಚಾಯಿತಿಗಳು ಮಾಡುತ್ತಿಲ್ಲವೆ, ಆ ಪಂಚಾಯಿತಿ ಪ್ರದೇಶದಲ್ಲಾದರೂ ಕೂಡ ಒಬ್ಬ ವ್ಯವಸಾಯ ಇಲಾಖೆಯ ನೌಕರ ಇರಬೇಕು. ಅವನು ಸ್ವಲ್ಪ ಹೆಚ್ಚು ಈ ಇಲಾಖೆಯ ಕೆಲಸ ಕಾರ್ಯಗಳ ವಿಷಯದಲ್ಲಿ ತಿಳಿದವನಾಗಿರಬೇಕು. ಹಾಗೆ ಎನ್ನುವ ಅಭಿಪ್ರಾಯ ಕೂಡ ಇದೆ. ಅದನ್ನು ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ.

ಶ್ರೀ ಮುನಿನರಸಿಂಹಯ್ಯ.—ಅವರ ವೇತನದಲ್ಲಿ ಅನ್ಯಾಯವಾಗಿರುವುದನ್ನು ಸರಿಪಡಿಸಿಕೊಡುತ್ತೀರೋ ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಆಶ್ವಾಸನೆಯನ್ನು ಕೊಡಬೇಕು ಎಂದು ತಮ್ಮ ಮುಖೇನ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವರ ವೇತನದಲ್ಲಿ ಏನು ಅನ್ಯಾಯವಾಗಿದೆ, ಅದನ್ನು ತಾವು ಸರಿಪಡಿಸಲಿಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ನೌಕರರನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಮತ್ತೆ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಅವರ ವೇತನ ಶ್ರೇಣಿಯನ್ನು ಉತ್ತಮಪಡಿಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎಂಬ ಬಗ್ಗೆ ಆಲೋಚನೆ ಮಾಡುತ್ತೇನೆ ಸ್ವಾಮಿ.

ಮೂಡಿಗೆರೆ ಕ್ಷೇತ್ರದಲ್ಲಿ ಎನ್‌ಆರ್‌ಡಬ್ಲ್ಯೂಪಿ ಯೋಜನೆ

೨೬೭ (ಲಿಖಿತ) ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಅಲ್ಲೂರು, ವಸ್ತಾರೆ ಹೋಬಳಿಯ ಮೈಲಿಮನೆ, ಹೆಡದಾಳು, ಮೆಂಗಲಹಾಂದಿ, ಹೊಸಪೇಟೆ ಮತ್ತು ಸಾಲುಕುಂಬಿ ಇಲ್ಲಿನ ಎನ್‌ಆರ್‌ಡಬ್ಲ್ಯೂಪಿ ಸ್ಕೀಮ್‌ಗಳು ಹಾಳಾಗಲು ಕಾರಣವೇನು ?

ಆ) ಹೀಗಾಗದಂತೆ ತಡೆಯಲು ಸರ್ಕಾರ ಏನು ಕಠಿಣ ಕ್ರಮ ಕೈಗೊಳ್ಳುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಚಿಕ್ಕಮಗಳೂರು ತಾಲ್ಲೂಕು, ವಸ್ತಾರೆ ಹೋಬಳಿ ಮತ್ತು ಅಲ್ಲೂರು ಹೋಬಳಿಗೆ ಸೇರಿರುವ ಮೈಲಿಮನೆ, ಮೆಂಗಲಹಾಂಧಿ, ಹೊಸಪೇಟೆ, ಹೆಡದಾಳು ಮತ್ತು ಸಾಲುಕುಂಬಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳಲ್ಲಿ ಈ ಕೆಳಕಂಡ ಕಾರಣಗಳಿಂದ ನೀರು ಪೂರೈಕೆಗೆ ತೊಂದರೆಯಾಗಿರುತ್ತದೆ.

೧) ಮೈಲಿಮನೆ: —ಈ ಗ್ರಾಮದ ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆಯು

೧. ಆನುಮೋದಿಸಲ್ಪಟ್ಟ ಜಲಮೂಲದ ಪೈಪಲ್ಕದಿಂದ.

೨. ಬದಲಿ ಜಲಮೂಲದಲ್ಲೂ ಸಹ ಅಗತ್ಯ ಪ್ರಮಾಣದ ನೀರಿನ ಕೊರತೆ,

೨. ತಾಂತ್ರಿಕ ದೋಷ:

ಅ) ಏರು ಕೊಳವೆ ಮಾರ್ಗದ ನಿರ್ಮಾಣ ಹಂತದಲ್ಲಿನ ದೋಷ ಮತ್ತು

ಆ) ಶಕ್ತಿರೇಚಕದಲ್ಲಿ ನೀರೆತ್ತುವ ಸಾಮರ್ಥ್ಯದ ಕೊರತೆಗಳಿಂದ ನೀರು ಪೂರೈಕೆಗೆ ತೊಂದರೆಯಾಗಿರುತ್ತದೆ.

೨) ಮೇಗಳಹಾಂದಿ: —ಈ ಗ್ರಾಮದ ಕಿರು ನೀರು ಸರಬರಾಜು ಯೋಜನೆಯ ಕೊಳವೆ ಬಾವಿಯಲ್ಲಿ ನೀರಿಲ್ಲದೆ ತೊಂದರೆಯಾಗಿರುತ್ತದೆ.

೩) ಹೊಸಪೇಟೆ: —ಈ ಗ್ರಾಮಕ್ಕೆ ನೀರು ಸರಬರಾಜು ಮಾಡುತ್ತಿದ್ದ ತೆರೆದ ಬಾವಿಗೆ ಖಾಸಗಿ ವ್ಯಕ್ತಿಯೊಬ್ಬರು ಪಂಪನ್ನು ಅಳವಡಿಸಿದ್ದರಿಂದ ನೀರಿನ ಪ್ರಮಾಣ ಕಡಿಮೆಯಾಗಿ ತೊಂದರೆಯಾಗಿರುತ್ತದೆ.

೪) ಹೆಡದಾಳು: —ಈ ಗ್ರಾಮದ ಕಿರು ನೀರು ಸರಬರಾಜು ಯೋಜನೆಯಲ್ಲಿ ನಿರ್ಮಿಸಿದ ತೆರೆದ ಬಾವಿಯಲ್ಲಿ ನೀರಿನ ಕೊರತೆಯಿಂದ ತೊಂದರೆಯಾಗಿರುತ್ತದೆ.

೫) ಸಾಲುಕಾಂಬಿ: —ಈ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತಿದ್ದ ವಿತರಣಾ ಕೊಳವೆ ಮಾರ್ಗವನ್ನು ಕೆಲವು ದುಷ್ಕರ್ಮಿಗಳು ಹಾಳು ಮಾಡಿರುವುದರಿಂದ, ನೀರು ಸರಬರಾಜು ಒದಗಿಸಲು ತೊಂದರೆಯಾಗಿರುತ್ತದೆ.

೮) ಈ ಯೋಜನೆಗಳನ್ನು ಸರಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಮೈಲಿಮನೆ: —ಮೈಲಿಮನೆ ಗ್ರಾಮದ ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆಯ ಏರು ಕೊಳವೆ ಮಾರ್ಗವನ್ನು ಬದಲಾಯಿಸಿದ್ದು ಹೆಚ್ಚು ಸಾಮರ್ಥ್ಯದ ಶಕ್ತಿರೇಚಕವನ್ನು ಅಳವಡಿಸಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ.

೨) ಮೇಗಳಹಾಂದಿ: —ಹಿರಿಯ ಭೂ ವಿಜ್ಞಾನಿಗಳಿಂದ ಸ್ಥಳ ಪರಿಶೀಲಿಸಿದಾಗ ಕೊಳವೆ ಬಾವಿಗೆ ಜಲಮೂಲ ದೊರೆಯದ ಕಾರಣ ತೆರೆದ ಬಾವಿ ತೆಗೆಯುವ ಕ್ರಮ ಕೈಗೊಂಡು ನೀರು ಸರಬರಾಜು ಕಲ್ಪಿಸಲಾಗುವುದು. ಹಾಲಿ ಇರುವ ಕೈಪಂಪು ಕೊಳವೆ ಬಾವಿಗಳಿಂದ ನೀರು ಪೂರೈಕೆ ಒದಗಿಸಲಾಗುತ್ತಿದೆ.

೩) ಹೊಸಪೇಟೆ: —ತೆರೆದ ಬಾವಿಗೆ ಖಾಸಗಿ ವ್ಯಕ್ತಿಯೊಬ್ಬರು ಪಂಪನ್ನು ಅಳವಡಿಸಿದ್ದು ಇಲಾಖೆಯ ಗಮನಕ್ಕೆ ಬಂದ ತಕ್ಷಣ ಪಂಪನ್ನು ತೆಗೆಸಲಾಗಿದ್ದು, ನೀರು ಸರಬರಾಜನ್ನು ಪುನರ್ಸ್ಥಾಪಿಸಲಾಗಿರುತ್ತದೆ.

೪) ಹೆಡದಾಳು: —ಈ ಗ್ರಾಮದ ಕಿರು ನೀರು ಸರಬರಾಜು ಯೋಜನೆಗೆ ಪೂರಕವಾಗಿ ಮತ್ತೊಂದು ಜಲಮೂಲದಿಂದ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದ್ದು ಕೈಗೊಳ್ಳಲಾಗುವುದು.

೫) ಸಾಲುಕಾಂಬಿ: —ದುಷ್ಕರ್ಮಿಗಳು ಒಡೆದುಹಾಕಿದ್ದ ವಿತರಣಾ ಕೊಳವೆ ಮಾರ್ಗವನ್ನು ಸರಿಪಡಿಸಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ನನಗೆ ಜಿಲ್ಲಾಪರಿಷತ್ತು ಇಂಜಿನಿಯರಿಂಗ್ ಇಲಾಖೆಯ ಬಗ್ಗೆ ಬಹಳ ಬೇಸರ ಬಂದಿದೆ. ನಿಜ ಹೇಳಬೇಕೆಂದರೆ ಕುಡಿಯುವ ನೀರು ಪ್ರತಿಯೊಬ್ಬನಿಗೆ ಬಹಳ ಅಗತ್ಯವಾದುದು. ಇವರು ರಸ್ತೆ ಕೆಲಸ, ಬೋರಿ ಕೆಲಸವಾದರೆ ಬಹಳ ಬೇಗ ಚೆನ್ನಾಗಿ ಮಾಡುತ್ತಾರೆ. ಆದರೆ ಕುಡಿಯುವ ನೀರಿನ ಯೋಜನೆಯನ್ನು ವರ್ಷಾನುಗಟ್ಟಲೆಯಾದರೂ ಪೂರ್ಣಮಾಡಿ ನೀರನ್ನು ಕೊಡುವುದಕ್ಕೆ ಮುಂದಾಗುವುದಿಲ್ಲ. ಜೊತೆಗೆ ದೋಷಪೂರ್ಣವಾದ ಕುಡಿಯುವ ನೀರಿನ ಯೋಜನೆಯನ್ನು ಮಾಡುವುದಕ್ಕೆ ಮುಂದಾಗುತ್ತಾರೆ ಉದಾ: ಎಂದರೆ ನಾನು ಕೇಳಿರುವ ನನ್ನ ಕ್ಷೇತ್ರದ ಮೈಲಿಮನೆ. ಮೈಲಿಮನೆ ಕುಡಿಯುವ ನೀರಿನ ಯೋಜನೆ ಸುಮಾರು ೮೯ರಲ್ಲಿ ಮಂಜೂರಾದ ಯೋಜನೆ. ಸುಮಾರು ನಾಲ್ಕುವರೆ ಲಕ್ಷ. ಐದು ಲಕ್ಷ ರೂಪಾಯಿಗಳಲ್ಲಿ ತ್ವರಿತ ಕುಡಿಯುವ ನೀರಿನ ಯೋಜನೆ ತಯಾರಾಗಿದೆ. ಆದರೆ ಇದುವರೆಗೂ ಆ ಜನರಿಗೆ ನೀರನ್ನು ಕೊಡುವುದಕ್ಕಾಗಿಲ್ಲ. ಒಂದು ಪಂಪ್ ಕುಡ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಇನ್ನೊಂದು ಬಾವಿಯಲ್ಲಿ ನೀರು ಸಿಕ್ಕುತ್ತಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಟೆಕ್ನಿಕಲ್ ಇಂಜಿನಿಯರ್ ಏತಕ್ಕೆ ಬೇಕು ? ಜಿಯಾಲಜಿಸ್ಟ್ ಪಾಯಿಂಟ್ ಏತಕ್ಕೆ ಗುರುತು ಮಾಡಬೇಕು ? ಕುಡಿಯುವ ನೀರು ಸಮರ್ಪಕವಾಗಿ ಜನರಿಗೆ ಕೊಡಬೇಕು ಎಂದು ಹೇಳಿದರೆ ಇವರು ಸರಿಯಾಗಿ ನೀರು ಎಲ್ಲಿ ಸಿಗುತ್ತದೆ ಎಷ್ಟು ಹೆಜ್ಜೆ ಮೋಟಾರ್ ಹಾಕಿದರೆ ಆ ಗ್ರಾಮದ ಎಲ್ಲಾ ಜನರಿಗೂ ನೀರು ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ವಿಚಾರ ಮಾಡುವುದಿಲ್ಲ. ನಾನು ಹೇಳುತ್ತೇನೆ, ಈ ಒಂದು ದೋಷಪೂರ್ಣವಾದ ಕುಡಿಯುವ ನೀರಿನ ಯೋಜನೆ ಮೈಲಿಮನೆಯಲ್ಲಿ ಮಾಡಿರುವುದಕ್ಕೆ ಸಂಬಂಧಪಟ್ಟ ಇಂಜಿನಿಯರು ಮತ್ತು ಜಿಯಾಲಜಿಸ್ಟ್ ಕಾರಣ ಇವರ ಬಗ್ಗೆ ಏತಕ್ಕೆ ನೀವು ಕ್ರಮ ತೆಗೆದುಕೊಳ್ಳಬಾರದು ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಈ ನಾಲ್ಕು ಹಳ್ಳಿಗಳಲ್ಲಿ ಯಾವ ರೀತಿ ತೊಂದರೆಯಾಗಿದೆ ಎಂಬುದರ ಬಗ್ಗೆ ಸ್ಪಷ್ಟವಾದಂಥ ವಿವರಗಳನ್ನು ಕೊಟ್ಟಿದ್ದೇವೆ. ಈ ಮೈಲಿಮನೆಯಲ್ಲಿ ಟೆಕ್ನಿಕಲ್ ಡಿಫೆಕ್ಟೀವ್ ಕೆಲಸ ನಡೆದಿದ್ದು ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದಕಾರಣ ಸಂಬಂಧಪಟ್ಟ ಅಧಿಕಾರಸ್ಥರ ಮೇಲೆ ಎನ್‌ಕ್ವೈರಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಏನೂ ತೊಂದರೆ ಇಲ್ಲ. ಅದೇ ರೀತಿ ಬೇರೆ ಹಳ್ಳಿಗಳಲ್ಲಿ ವಿಶೇಷವಾಗಿ ನೀರಿನ ಅಭಾವದಿಂದ ತೊಂದರೆಯಾಗುತ್ತಿದೆ. ಬೋರ್ ಹಾಕಿದರೂ ಕೂಡ ನೀರು ಸಿಗುವುದಿಲ್ಲವಾದ್ದರಿಂದ, ಬೇರೆ ಕಡೆ ಬೋರ್ ಹಾಕಬೇಕಾಗುತ್ತದೆ. ಈಗ ಮೇಗಳಹಾಂದಿಯಲ್ಲಿ ಜಲ ಸಂಪತ್ತು ಸಾಕಷ್ಟಿಲ್ಲ. ಆದರೆ, ಹೊಸಪೇಟೆಯಲ್ಲಿ ಖಾಸಗಿ ವ್ಯಕ್ತಿಯೋರ್ವರು ಬೋರ್‌ವೆಲ್ ಅನ್ನು ಹಾಕಿದರು. ಆದನ್ನು ತೆಗೆಸಿ, ಸರಿಪಡಿಸಿ ಮತ್ತೆ ಅಲ್ಲಿ ನೀರು ಸರಬರಾಜು ಪ್ರಾರಂಭಿಸಿದ್ದೇವೆ. ಹೆಡದಾಳು ಮತ್ತು ಸಾಲುಕೊಂಭ ಇಲ್ಲಿಯೂ ಕೂಡ ಜಲ ಸಂಪತ್ತು ಸಾಕಷ್ಟಿಲ್ಲ. ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಏನಿದೆ ಅದನ್ನು ಹಳ್ಳಿಯ ಜನ ಉದ್ದೇಶಪೂರ್ವಕವಾಗಿ ಕೆಡಿಸಿಬಿಟ್ಟಿದ್ದರು. ಅದನ್ನು ಸರಿಪಡಿಸಿ ಮತ್ತೆ ನೀರಿನ ಸರಬರಾಜು ವ್ಯವಸ್ಥೆ ಮಾಡಿದ್ದೇವೆ. ಇದನ್ನು ನಾನು ಹೇಳುವ ಉದ್ದೇಶವೆನೆಂದರೆ, ನೀರನ್ನು ವ್ಯವಸ್ಥಿತವಾಗಿ ಸರಬರಾಜು ಮಾಡಲು ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಹಲವಾರು ಕಾರಣಗಳಿಂದ ತೊಂದರೆಯಾಗುತ್ತದೆ. ಆ ರೀತಿ ತೊಂದರೆಯಆದ ತಕ್ಷಣ ಅದನ್ನು ಸರಿಪಡಿಸುವ ಕ್ರಮವನ್ನು ಸರ್ಕಾರ ಮಾಡುತ್ತಿದೆ.

ಶ್ರೀಮತಿ ಮೋಟಮ್ಮ.—ತಾವು ದಯಮಾಡಿಸಿತವ್ಯ ಇಲಾಖೆಯ ಇಂಜಿನಿಯರುಗಳಿಗೆ ಆದೇಶ ಕೊಡಬೇಕಾಗುತ್ತದೆ. ಮೊದಲು ಅದ್ಯತೆ ಕುಡಿಯುವ ನೀರು ವ್ಯವಸ್ಥೆ ಮಾಡುವ ಬಗ್ಗೆ ಕೊಡಬೇಕು, ಇದರ ಬಗ್ಗೆ ಸಿನ್ಸಿಯರ್ ಆಗಿ ಕೆಲಸ ಮಾಡಬೇಕು. ಯಾರು ಕುಡಿಯುವ ನೀರಿನ ಕೆಲಸವನ್ನು ತ್ವರಿತವಾಗಿ ಮಾಡುವುದಕ್ಕೆ ಮುಂದಾಗುವುದಿಲ್ಲವೋ ಡಿಫೆಕ್ಟೀವ್ ಆಗಿ ಕೆಲಸ ಮಾಡುತ್ತಾರೋ ಅಂತಹವರನ್ನು ಮನೆಗೆ ಕಳುಹಿಸುವ ವ್ಯವಸ್ಥೆ ಮಾಡುವುದಾಗಿ ಒಪ್ಪಿಕೊಂಡಿದ್ದೀರಿ. ಮತ್ತು ಈ ಕೆಲಸದಲ್ಲಿ ಸಂಬಂಧಿಸಿದ ಜ್ಯೂನಿಯರ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಯಾರಿದ್ದಾರೆ ಅವರ ಮೇಲೆ ವಿಚಾರಣೆ ನಡೆಸಿ ಮನೆಗೆ ಕಳುಹಿಸಬೇಕು. ಹೊಸಪೇಟೆ ವಿಚಾರದಲ್ಲಿ ತಾವು ಹೇಳಿದಂತೆ ಆಲ್ಲೊಬ್ಬ ಖಾಸಗಿ ವ್ಯಕ್ತಿ ನಮ್ಮ ಜಲ ಸಂಪನ್ಮೂಲ ಏನಿದೆ, ಬಾವಿಯಲ್ಲಿ ಪಂಪ್ ಇಟ್ಟು ನೀರು ತೆಗೆದುಕೊಳ್ಳುತ್ತಾನೆಂದರೆ ಇದು ಇಂಜಿನಿಯರ್‌ರವರಿಗೂ ಗೊತ್ತಿರುತ್ತದೆ. ಅವರ ಅನುಮತಿಇಲ್ಲದೆ, ಅವರೊಂದಿಗೆ ಶಾಮೀಲಾಗಿರದೆ ಆತ ನೀರನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಲ್ಲವಿದ್ದರೆ, ಜನರು ಆ ವ್ಯಕ್ತಿಯನ್ನು ಹಿಡಿದುಕೊಂಡು ಹೊಡೆಯುತ್ತಿದ್ದರು. ಏಕೆಂದರೆ, ಖಾಸಗಿ ವ್ಯಕ್ತಿಗೆ ಇಂಜಿನಿಯರ್‌ರವರ ಬೆಂಬಲವಿದೆಯೆಂದು ಜನರು ಆತನ ಮೇಲೆ ಜಗಳಕ್ಕೆ ಹೋಗಿಲ್ಲ. ಇದಕ್ಕೆ ಸಂಬಂಧಿಸಿದ ಜ್ಯೂನಿಯರ್ ಇಂಜಿನಿಯರ್ ಯಾರಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಿಕೊಳ್ಳಬೇಕಾದರೆ ನಾನು ಎಷ್ಟು ಕಷ್ಟಪಡಬೇಕಾಗಿದೆ. ತಮಗೆ ಗೊತ್ತಿರುವಂತೆ ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ

ಯಿದ್ದು, ಈ ಬಗ್ಗೆ ಸದನದಲ್ಲಿ ಸಾಕಷ್ಟು ಸಾರಿ ಗದ್ದಲ ಮಾಡಿದ್ದೇನೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ವಿಶೇಷ ಅನುದಾನ ಕೊಡುವುದಾಗಿ ತಾವು ಕಳೆದ ಹಿಂದೆ ಹೇಳಿದ್ದೀರಿ. ಆದರೆ, ಇನ್ನು ಯಾವುದೇ ಅನುದಾನ ಸಿಕ್ಕಿಲ್ಲ ನಾನು ಈ ವರ್ಷ ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ನಾನು ಹೇಗೆ ಜನರ ಮುಂದೆ ಹೋಗಬೇಕೆಂಬುದನ್ನು ತಾವು ಯೋಚನೆ ಮಾಡಿ. ಮತ್ತು ವಿಫಲವಾದ ಕೊಳವೆ ಬಾವಿಗಳನ್ನು ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಆದಷ್ಟು ಬೇಗ ಸರಿಪಡಿಸಿ ಜನರಿಗೆ ಕುಡಿಯುವ ನೀರನ್ನು ದಕ್ಕಿಸುವ ವ್ಯವಸ್ಥೆ ಮಾಡಬೇಕು. ತಮಗೆ ಗೊತ್ತಿರುವಂತೆ ನನ್ನ ಕ್ಷೇತ್ರದಲ್ಲಿ ಜಲ ಸಂಪನ್ಮೂಲ ಇಲಾಖೆಯ ಕೆಲಸಗಳು ಬಹಳ ಕಡಿಮೆ ಆದುದರಿಂದ, ಇಂತಹ ಕಡೆ ಬೇರೆ ಯೋಜನೆಗಳಿಗೆ ದುಡ್ಡು ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ನನ್ನ ಕ್ಷೇತ್ರದ ಭಾಗಕ್ಕೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಮೈಲಿಮನಿಯಲ್ಲಿ ರೈಸಿಂಗ್ ಮೈನ್ ಅನ್ನು ಡಿಫೆಕ್ಟಿವ್ ಆಗಿ ಮಾಡಿದ್ದರಿಂದ ಅದನ್ನು ಮತ್ತೆ ರಿಪೇರಿ ಮಾಡಿ ಸರಿಪಡಿಸಿದ್ದೇವೆ, ಮತ್ತು ಹೈಯರ್ ಹೆಚ್. ಪಿ. ಏನು ಪಂಪ್‌ಸೆಟ್ ಹಾಕಬೇಕಾಗಿತ್ತು, ಅದನ್ನು ಹಾಕಿದ್ದೇವೆ. ಅವರು ಏತಕ್ಕೋಸ್ಕರ ಅದನ್ನು ಸರಿ ಮಾಡಿಲ್ಲದಿರುವುದರ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಹೊಸಪೇಟೆಯಲ್ಲಿ ಖಾಸಗಿ ವ್ಯಕ್ತಿಯೋರ್ವರು ಪಂಪ್‌ಸೆಟ್ ಹಾಕಿ ನೀರು ತೆಗೆದುಕೊಳ್ಳುತ್ತಿದ್ದುದರಿಂದ ಅದನ್ನು ತೆಗೆಸಿದ್ದೇವೆ. ಮತ್ತು ಅಲ್ಲಿರುವ ನೀರು ಈಗ ಹಳ್ಳಿಗೆ ಹೋಗುವಂತೆ ವ್ಯವಸ್ಥೆ ಮಾಡಿದ್ದೇವೆ. ಹಳ್ಳಿ ಮಟ್ಟದಲ್ಲಿ ಇಂತಹ ಪ್ರಸಂಗಗಳು ನಡೆಯುತ್ತಿರುತ್ತವೆ. ಈ ರೀತಿ ನಡೆಯುತ್ತಿದ್ದು ನಾವು ಆ ಕಡೆ ನಿರ್ಲಕ್ಷ್ಯ ಮಾಡಿದರೆ ನಮ್ಮ ಸರ್ಕಾರದ ಮೇಲೆ ದೋಷಾರೋಪಣೆ ಮಾಡುವುದಕ್ಕೆ ಆಸ್ಪದವಿರುತ್ತದೆ, ಆ ರೀತಿಯಾದ ಯಾವುದೇ ಆಸ್ಪದಕ್ಕೂ ಅವಕಾಶ ಕೊಟ್ಟಿಲ್ಲ. ಮತ್ತು ಮೈಲಿಮನಿಯಲ್ಲಿ ಏನಾ ದೋಷಪೂರಿತ ಕೆಲಸ ನಡೆದಿತ್ತು, ಅದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ರಮೇಶ್ (ಉತ್ತರಹಳ್ಳಿ).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸುಮಾರು ೫೦-೬೫ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಅದಕ್ಕೆ ಪಂಪ್‌ಸೆಟ್ ಇಲ್ಲ ಹ್ಯಾಂಡ್ ಪಂಪ್ ಸಹ ಇಲ್ಲ. ಈ ಬಗ್ಗೆ ಕೇಳಿದರೆ, ನಮ್ಮ ಹತ್ತಿರ ಪೈಪ್ ಇಲ್ಲ. ಪಂಪ್ ಇಲ್ಲವೆಂದು ಹೇಳುತ್ತಾರೆ. ಸಪ್ಲೈಯರ್ಸ್ ಏನೂ ಕೊಡುತ್ತಿಲ್ಲ. ದುಡ್ಡು ಕೊಡುವವರೆಗೂ ನಿಮಗೆ ಏನೂ ಸಿಗುವುದಿಲ್ಲವೆಂದು ಪದೇ ಪದೇ ಹೇಳುತ್ತಿದ್ದಾರೆ. ಇದಕ್ಕೆ ತಾವು ಸೂಕ್ತ ಕ್ರಮ ಕೈಗೊಳ್ಳುತ್ತೀರಾ? ಆದಷ್ಟು ಬೇಗ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಬೇಸಿಗೆ ಕಾಲ ಶುರುವಾಗುತ್ತಿದೆ. ಇಲ್ಲದಿದ್ದರೆ, ಮಾನ್ಯ ಸದಸ್ಯರಾದ ಶ್ರೀಮತಿ ವೋಟಮ್ಮನವರು ಹೇಳಿದಂತೆ ನಾವು ನಮ್ಮ ಕ್ಷೇತ್ರವನ್ನು ಸುತ್ತುವುದಕ್ಕೆ ತುಂಬಾ ಕಷ್ಟವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮಿನಿ ವಾಟರ್ ಸ್ಕೀಮ್ ಎಂದು ಪ್ರಾರಂಭಿಸಿದ್ದಾರೆ. ಪ್ರಾರಂಭಿಸಿ ಒಂದೆರಡು ವರ್ಷಗಳಾದರೂ ಇನ್ನೂ ಕೆಲಸ ಮುಗಿದಿಲ್ಲ. ಇದರ ಬಗ್ಗೆಯೂ ತಾವು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಇದು ಶ್ರೀಮತಿ ವೋಟಮ್ಮನವರ ಮೂಡಿಗೆರೆ ವಿಧಾನ ಸಭೆ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲಸವಾಗಿದೆ. ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲಸವಾಗಿದ್ದರೆ ತಾವು ಬೇರೆ ಪ್ರಶ್ನೆ ಕೇಳಬೇಕು.

ಶ್ರೀ ಎಸ್. ರಮೇಶ್, —ಎಂ. ಪಿ. ಡಿ. ಸ್ಕೀಮ್ ಅನ್ನು ನನ್ನ ಕ್ಷೇತ್ರದಲ್ಲೂ ಪ್ರಾರಂಭಿಸಿರುವುದರಿಂದ ಇದಕ್ಕೆ ಸಂಬಂಧಿಸಿದ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀಮತಿ ವೋಟಮ್ಮ.—ಇಂಜಿನಿಯರಿಂಗ್ ಇಲಾಖೆಯವರು ಎಷ್ಟು ಕೆಟ್ಟು ಹೋಗಿದ್ದಾರೆಂದರೆ, ರಸ್ತೆ, ಮೋರಿ, ಇನ್ನಿತರ ಕೆಲಸಗಳನ್ನು ಬಹಳ ನಿಧಾನವಾಗಿ ಮಾಡುತ್ತಾರೆ. ಆದರಲ್ಲೂ ಕುಡಿಯುವ ನೀರಿನ ಕೆಲಸವನ್ನಂತೂ ಬೇಗ ಮಾಡುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ,—ಮಾನ್ಯ ಅಧ್ಯಕ್ಷರೇ, ಇದು ಸಾಮಾನ್ಯ ಪ್ರಶ್ನೆಯಾಗಿರುವುದರಿಂದ ಇದಕ್ಕೆ ಉತ್ತರವಾಗಿ ನಾನು ಹೇಳಬಯಸುವುದೇನೆಂದರೆ, ಇಡೀ ಕರ್ನಾಟಕದಲ್ಲಿ ನಾವು ೧,೩೫,೦೦೦ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಸಾಮಾನ್ಯವಾಗಿ ಇದರಲ್ಲಿ ಶೇಕಡ ೧೦ ರಷ್ಟು ಬೋರ್‌ವೆಲ್‌ಗಳನ್ನು ರಿಪೇರಿ ಮಾಡಬೇಕಾಗುತ್ತದೆ. ಇವೊತ್ತು ನಾವು ರಿಪೇರಿ ವ್ಯವಸ್ಥೆ ಏನು ಮಾಡಿದ್ದೇವೆ, ಅದನ್ನು ಯಾವ ತಿಂಗಳಿನಲ್ಲಿ ರಿಪೇರಿ ಮಾಡಿಸಬೇಕೋ ಅದೇ ತಿಂಗಳಿನಲ್ಲಿ ೧೦ ಪರ್ಸೆಂಟ್‌ನಲ್ಲಿ ೯೦ ಪರ್ಸೆಂಟ್ ಅನ್ನು ನಾವು ರಿಪೇರಿ ಮಾಡಿಸುತ್ತಿದ್ದೇವೆ. ಇದರಲ್ಲಿ ತೊಂದರೆ ಏನಾಗಿದೆ ಎಂದರೆ, ಅಂಡರ್ ಗ್ರಾಂಡ್

ವಾಟರ್ ರಿಸೋರ್ಸ್ ಬಗ್ಗೆ ಇದೆ. ಅದು ಕೆಳಮಟ್ಟಕ್ಕೆ ಹೋಗುತ್ತಿದೆ. ಆದ್ದರಿಂದ ನಾವು ಒಂದೇ ಬೋರ್‌ವೆಲ್‌ಗಳನ್ನು ಅಲ್ಲಿ ಹಾಕುವುದು ಒಂದೇ ಅಲ್ಲ. ನಾವು ಎಲ್ಲಿ ಬೋರ್‌ವೆಲ್‌ನ್ನು ಹಾಕುತ್ತೇವೋ ಅಲ್ಲಿ ವಾಟರ್ ಮ್ಯಾನೇಜ್‌ಮೆಂಟ್, ಅಂದರೆ ನೀರನ್ನು ಸಲ್ಲಿಸತಕ್ಕ ಕ್ರಮವನ್ನು ವ್ಯಾಪಕವಾಗಿ ಮಾಡಬೇಕೆಂದು ನಾನು ಹದೇ ಹದೇ ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾವು ಬೋರ್‌ವೆಲ್‌ನ್ನು ಹಾಕಿದರೂ ಕೂಡ ನೀರು ಸಿಗುವುದು ಕಷ್ಟವಾಗುತ್ತದೆ.

ಶ್ರೀ ಎಸ್. ರಮೇಶ್.—ಇಲ್ಲಿ ಕನ್‌ಫ್ಯೂಷನ್ ಆಗಿದೆ. ನಾನು ಗೌರವಾನ್ವಿತ ಸಚಿವರಲ್ಲಿ ಬೋರ್‌ವೆಲ್ ರಿಪೇರಿಯ ಬಗ್ಗೆ ಕೇಳುತ್ತಿಲ್ಲ. ನಾನು ಕೇಳುತ್ತಿರುವುದೇನೆಂದರೆ, ಬೋರ್‌ವೆಲ್‌ನ್ನು ಡಿಗ್ ಮಾಡಿದ್ದಾರೆ. ಆದರೆ ಅಲ್ಲಿಗೆ ಹ್ಯಾಂಡ್ ಪಂಪ್‌ನ್ನು ಹಾಕಿರುವುದಿಲ್ಲ. ಮಿನಿ ವಾಟರ್ ಸ್ಕೀಮ್‌ನ್ನು ಪ್ರಾರಂಭ ಮಾಡಿದ್ದಾರೆ, ಆದರೆ ಒಂದೂವರೆ ವರ್ಷಗಳಾದರೂ ಸಹ ಅದು ಪೂರ್ತಿಗೊಂಡಿಲ್ಲ. ನನ್ನ ಕ್ಷೇತ್ರದಲ್ಲೇ ಇಪ್ಪತ್ತು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಆದರೆ ಅವುಗಳಿಗೆ ಹ್ಯಾಂಡ್ ಪಂಪ್ ಹಾಕಿಲ್ಲ. ಅಧಿಕಾರಿಗಳನ್ನು ಕೇಳಿದರೆ ಪಂಪುಗಳು ಸ್ಟಾಕ್ ಇಲ್ಲ, ನಮಗೆ ಹಣ ಸಿಕ್ಕಿಲ್ಲ, ಹಣವನ್ನು ಕೊಡುವವರೆಗೆ ಸಪ್ಲೆಯರ್‌ಗಳು ಪಂಪನ್ನು ಸಪ್ಲೈ ಮಾಡುವುದಿಲ್ಲ ಎಂಬ ವಾದವನ್ನು ಅಧಿಕಾರಿಗಳು ಮಂಡಿಸುತ್ತಾರೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಎಂ. ವೈ. ಘೋರ್ಪಡೆ.—ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿರುವುದರಿಂದ, ಎಲ್ಲೋ ಒಂದು ಕಡೆ ಅಧಿಕಾರಿಗಳು ಕೆಲಸ ಮಾಡದಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀಮತಿ ಪುಷ್ಪಾವಸಂತ್.—ಒಂದೊಂದು ಬೋರ್‌ವೆಲ್‌ನ್ನು ತೆಗೆಯಲು ೩೦-೪೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಈ ರೀತಿ ತೆಗೆದ ಬೋರ್‌ವೆಲ್‌ಗಳು ವಿಫಲಗೊಂಡರೆ, ತಾವು ತೆರವು ಖಾಲಿಗಳನ್ನು ಮಾಡಲು ಅನುಮತಿ ಕೊಡಬಹುದಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ.—ತೆರವು ಖಾಲಿಗಳನ್ನು ಮಾಡಲು ತೊಂದರೆಯೇನೂ ಇಲ್ಲ. ನೀರು ಸಿಕ್ಕಿದರೆ ಸಾಕು.

ಅಧ್ಯಕ್ಷರು.—ಸಾದತ್ ಅಲಿ ಖಾನ್‌ರವರೇ, ತಮ್ಮ ಪ್ರಶ್ನೆಯು ಪಿ.ಡಬ್ಲ್ಯೂ.ಡಿ. ಇಲಾಖೆಗೆ ವರ್ಗವಾಗಿರುತ್ತದೆ.

ಶ್ರೀ ಸಾದತ್ ಅಲಿ ಖಾನ್.—ಸನ್ಮಾನ್ಯ ಅಧ್ಯಕ್ಷರೇ, ಹೋದಸಲದ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ಹಾಕಿದ್ದೆ. ಆಗ ಪಿ.ಡಬ್ಲ್ಯೂ.ಡಿ. ಇಲಾಖೆಯ ಪರವಾಗಿ ಇಂದು ಜಿಲ್ಲಾಪರಿಷತ್‌ಗೆ ಬರುತ್ತದೆಂದು ಹೇಳಿದ್ದರು. ಜಿಲ್ಲಾ ಪರಿಷತ್‌ನವರನ್ನು ಕೇಳಿದರೆ ಪಿ.ಡಬ್ಲ್ಯೂ.ಡಿ.ಗೆ ಬರುತ್ತದೆಂದು ಹೇಳುತ್ತಾರೆ. ಹಾಗಾದರೆ ಇದು ಬೇರೆ ಮಾತ್ರುವುದಾದರೂ ವಿಜೆನ್ಸಿಗೆ ಬರುತ್ತದೆಯೇ? ಪಿ.ಡಬ್ಲ್ಯೂ.ಡಿ. ರೋಡೂ ಇಲ್ಲ, ಜಿಲ್ಲಾ ಪರಿಷತ್ ರೋಡೂ ಇಲ್ಲ.

ಅಧ್ಯಕ್ಷರು.—ನನಗೆ ಅದರ ಬಗ್ಗೆ ಕಳುಹಿಸಿಕೊಡಿ, ತದನಂತರ ತಮಗೆ ತಿಳಿಸುತ್ತೇನೆ.

ಧಾರವಾಡ ಜಿಲ್ಲಾ ಪರಿಷತ್ತಿನಿಂದ ಡಿ.ಪಿ.ಎ.ಪಿ. ಯೋಜನೆ

೩೦೨ (೬೨೧) ಶ್ರೀ ಮಂಜುನಾಥ ಸಿ. ಕಾಂಗ್ರೆಸ್ಸಿ (ಶಿಗ್ಗಾಂವ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ಜಿಲ್ಲಾ ಪರಿಷತ್ತಿನಿಂದ ಡಿ.ಪಿ.ಎ.ಪಿ. ಯೋಜನೆಯಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ೧೯೯೬-೯೭ನೇ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

ಆ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಡಿಪಿಎಪಿ ಯೋಜನೆಯಲ್ಲಿ ತೆಗೆದುಕೊಂಡ ಕೆಲಸಗಳಾವುವು ?

ಇ) ಅದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಅವು ಯಾವ ಹಂತದಲ್ಲಿದೆ ?